ಪ್ರಬಂಧ

# ದುಡ್ಡಿಲ್ಲ ಕಾಸಿಲ್ಲ




**ಭಾರತಿ ಹಾದಿಗೆ**

ಕಲೆ: ಸಂತೋಷ್ ಸಸಿಹಿತ್ಲು


ಪರ್ಸಿನಲ್ಲಿ ದುಡ್ಡು ಇಟ್ಟುಕೊಂಡಿದ್ದೀನಾ, ಇಲ್ಲವಾ ಅಂತ ಎರಡೆರಡು ಸಲ ನೋಡಿಕೊಳ್ಳುವುದಿತ್ತಲ್ಲ. ಆದರೆ ಅವತ್ತು ಅದಕ್ಕೆ ಬದಲಾಗಿ ಆಧಾರ್ ಕಾರ್ಡ್ ಇಟ್ಟುಕೊಂಡಿದ್ದೀನಾ ಇಲ್ಲವಾ ಅಂತ ಎರಡೆರಡು ಸಲ ನೋಡಿ, 'ಉಚಿತ ಬಸ್ ಪ್ರಯಾಣ, ನಾಳೆಯಿಂದ ನನ್ನ ಹೆಂಡತಿಗೂ ಫ್ರೀ, ನಿಮ್ಮ ಹೆಂಡತಿಗೂ ಫ್ರೀ' ಎಂದು ಹೇಳಿದ ಮಂತ್ರಿ ಮಹೋದಯರ ಮಾತನ್ನು ನೆನೆಯುತ್ತಾ ರೋಡಿಗಿಳಿದಾಗ ಗಂಟೆ ಬೆಳಗ್ಗೆ ಎಂಟು. ಬೇಗ ಬೇಗ ಓಡುತ್ತಾ ನಡೆಯುತ್ತಾ ಬಂದು ಗೆಳತಿಯರ ತಂಡ ಸೇರುವ ಹೊತ್ತಿಗೆ ಬೆವರಿಳಿದೇ ಹೋಯ್ತು. 'ಬಸ್ ಸ್ಟ್ಯಾಂಡಿಗೆ ಹೋಗುವ ಬದಲು ಇಲ್ಲೇ ಡೀಸಿ ಆಫೀಸ್ ಮುಂದೆ ನಿಂತು ಬಿಡೋಣ. ಸ್ಟಾಪ್ ಕೊಟ್ಟೇ ಕೊಡ್ತಾರೆ. ಸುಮ್ಮನೆ ಬಸ್ ಸ್ಟ್ಯಾಂಡ್‌ಗೆ ಹೋದ್ರೂ ವಾಪಸ್ ಬರ್ಲೇಬೇಕಲ್ಲ ಇನ್ನೇನು ಒಂದರಹಿಂದೆ ಒಂದು ಬಸ್ ಬರ್ತವೆ' ಎಂದ ವಿಜಯಾ ಮೇಡಂ ಮಾತಿಗೆ ನಾವೆಲ್ಲಾ ಒಪ್ಪಿ ಗುಂಪು ಕಟ್ಟಿಕೊಂಡು ನಿಂತು ಬಸ್ ಬರುವ ಕಡೆ ನೋಡತೊಡಗಿದೆವು.

ನಾಲ್ಕು ಬಸ್‌ಗಳು ಒಂದರಹಿಂದೆ ಒಂದು ಸ್ಪೀಡಾಗಿ ಬಂದು ಹೋಗೇಬಿಟ್ಟವು. ಕೈ ಅಡ್ಡ ಹಾಕಿದರೂ ನಿಲ್ಲಿಸಲಿಲ್ಲ. ಮತ್ತೆರಡು ಬಸ್ ಹೋದವು. ಪ್ರತೀ ದಿನ ನಿಲ್ಲುತ್ತಿದ್ದ ಬಸ್‌ಗಳು ಹೀಗೆ ಹೋಗುವುದನ್ನು ನೋಡಿ ನಮಗೆಲ್ಲಾ ಗಾಬರಿಯಾಯ್ತು. ಏನು ಮಾಡುವುದು? ಬಸ್ ಸ್ಟ್ಯಾಂಡಿಗೆ ಆಟೋದಲ್ಲಿ ಹೋಗಿ ಬಿಡೋಣ ಅಂತ ಒಬ್ಬರೆಂದರೆ, ಮತ್ತೊಬ್ಬರು, 'ನಾವು ಬರೀ ಹೆಂಗಸರಿದ್ದೀವಲ್ಲ ಅದಕ್ಕೆ ನಿಲ್ಲಿಸುತ್ತಿಲ್ಲ ಇರಿ ನೋಡೋಣ.. ಯಾರಾದರೂ ಗಂಡಸರು ಬರ್ಲಿ' ಅಂದರು. ಅಷ್ಟರಲ್ಲಿ ಗಂಡಸರು, ಗಂಡುಮಕ್ಕಳು ಬಂದು ನಮ್ಮ ಪಕ್ಕದಲ್ಲಿ ನಿಂತರು. ನೋಡಿದ ದಿಕ್ಕನ್ನೇ ನೋಡುತ್ತಾ ನಿಂತು ಸಾಕಾಗಿ ಹೋಗಿದ್ದ ನಾವುಗಳು, 'ಬೆಂಗಳೂರಿಗೆ ಹೋಗುವುದಕ್ಕೆ ಹೀಗೆಲ್ಲಾ ಪರದಾಡಬೇಕಾ ಬಸ್ಸಿಗೆ' ಎಂದು ಒಕ್ಕೊರಲಿನಿಂದ ನುಡಿಯುತ್ತಿರುವಾಗಲೇ ಬರಲೋ ಬೇಡವೋ ಎಂಬಂತೆ ಮೆಲ್ಲಗೆ ಬಂದ ಒಂದು ಬಸ್ಸು ನಿಲ್ಲಲೋ ಬೇಡವೋ ಅಂತ ನಿಂತಿತು. ನಾನ್ ಸ್ಟಾಪ್ ಅಂತ ಕಾದ್ರೆ ಆಗಲ್ಲ ಇವತ್ತು ಭಾನುವಾರ ಬೇರೆ ನಡೀರಿ ನಡೀರಿ ಹೋಗೋಣ ಎಂದ ಗೀತಕ್ಕನ ಮಾತಿಗೆ ತಲೆಬಾಗಿ ನಾವೆಲ್ಲಾ ಬಸ್ ಹತ್ತಿದೆವು. ಅಯ್ಯೋ ಸೀಟೇ ಇಲ್ವಲ್ಲಾ ಅಂದರು ಮೀನಕ್ಕ. ಅವರ ಮಾತು ಕೇಳಿ ಕಂಡಕ್ಟರ್, 'ಹೋಗಿ ಹೋಗಿ ಮುಂದೆ ಹೋಗಿ ಬಾಗಿಲಲ್ಲೇ ನಿಂತ್ರೆ ಬೇರೆ ಯಾರೂ ಹತ್ತೋದು ಬ್ಯಾಡವಾ? ನಡೀರಿ ನಡೀರಿ ಅಂತ ಗಟ್ಟಿಯಾಗಿ ಕೂಗಿ ಹೇಳಿ ಗಂಟಲಲ್ಲಿ ಮೆಲ್ಲಗೆ ದುಡ್ಡಿಲ್ಲ ಕಾಸಿಲ್ಲ' ಅಂದರು.

ಪ್ರಯಾಣ ಮುಂದುವರಿಯಿತು. ಬಸ್ ನಿಂತಲ್ಲೆಲ್ಲಾ ಹೆಂಗಸರೇ ಹೆಚ್ಚಾಗಿ ಬಂದು ನುಗ್ಗುತ್ತಿದ್ದರು. ನಮ್ಮ ಹಿಂದಿನ ಸೀಟಿನಲ್ಲಿ ಕುಳಿತವರೊಬ್ಬರು, 'ಜಾತ್ರೆ ಸಂತೆ ಇಲ್ಲೆ ಮಾಡಿ ಬಸ್ಸಲ್ಲಿ, ದುಡ್ಡಿಲ್ಲ ಕಾಸಿಲ್ಲ' ಅಂದರು. ನಾವು ಬೆಂಗಳೂರಿಗೆ ಹೋಗಿ ತಲುಪುವುದರೊಳಗೆ ತುಂಬಾ ಸಾರಿ ತುಂಬಾ